ಬೆಂಗಳೂರಿನ ಬಡಾವಣೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ.

1840 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಬಹಳಷ್ಟು ಬಡಾವಣೆಗಳಲ್ಲಿ ಕುಡಿಯುವ ನೀರಿನ ಸರಬರಾಜು ಸರಿಯಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುತ್ತದೆ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಯೋಜನೆಗಳೇನು? (ವಿವರ ನೀಡುವುದು)*

ಶ್ರೀ ಅನಂತ್‌ನಾಗ್ (ಬೆಂಗಳೂರು ನಾಗರಾಭಿವೃದ್ಧಿ ಸಚಿವರು) :

ಅ) *ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ನೀರಿನ ಕೊರತೆಯಿಂದ ಬೆಂಗಳೂರಿನ ಉತ್ತರ ಮತ್ತು ಪಶ್ಚಿಮ ಭಾಗದ ಬಡಾವಣೆಗಳಲ್ಲಿ ನೀರಿನ ಸರಬರಾಜು ಸರಿಯಾಗಿ ಆಗದೆ ಇರುವುದು ಕಂಡು ಬಂದಿದೆ.*

ಆ) *ಈಗಾಗಲೇ ದಿನಾಂಕ : 11.3.98 ರಂದು ಕಾವೇರಿ 3ನೇ ಹಂತದಲ್ಲಿ ಒಂದು ಹೆಚ್ಚುವರಿ ಪಂಪ್ (ಆರನೇ ಪಂಪ್) ಕಮಿಷನ್ ಮಾಡಿ ದಿನವಹಿ 27 ಮಿಲಿಯನ್ ಹೆಚ್ಚುವರಿ ನೀರು ಸರಬರಾಜು ಮಾಡಲಾಗುತ್ತಿದೆ. ಹೈಗ್ರೌಂಡ್ಸ್ ಬಳಿ ಒಂದು ಹೊಸ ಪಂಪ್ ಹೌಸ್ ನಿರ್ಮಾಣ ಮಾಡಿದೆ. ಇಲ್ಲಿಂದ ಕೆ.ಜಿ. ಟವರ್‌ಗೆ ಒಂದು ಹೊಸ ಪೈಪ್ ಲೈನ್ ಹಾಕಿದೆ. ಈ ಪೈಪ್ ಲೈನನ್ನು ಕೆಲವೇ ದಿವಸಗಳಲ್ಲಿ ಕಮಿಷನ್ ಮಾಡಲಾಗುವುದು. ಇದನ್ನು ಮಾಡಿದಾಗ ಹೈಗ್ರೌಂಡ್ಸ್‌ನಿಂದ ಕೇಡಮಾರನಹಳ್ಳಿ ಟ್ಯಾಂಕಿಂಗೆ ಸುಮಾರು 9 ದಶ ಲಕ್ಷ ಲೀಟರ್ ನೀರನ್ನು ಪೂರೈಕೆ ಮಾಡಿ ಈ ಭಾಗಗಳ ನೀರಿನ ಕೊರತೆಯನ್ನು ನಿವಾರಿಸಲಾಗುವುದು. 1997-98 ರಲ್ಲಿ 114 ಕೊಳವೆ ಬಾವಿಗಳನ್ನು ಕೊರೆದು 79 ಹ್ಯಾಂಡ್ ಪಂಪ್ 35 ವಿದ್ಯುತ್ ಪಂಪನ್ನು ಅಳವಡಿಸಲಾಗಿದೆ. 325 ಕೊಳವೆ ಬಾವಿಗಳನ್ನು ಕೊರೆಯಲು ಮಂಡಳಿಯೂ ರೂ. 253.50 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಲು ಸಲ್ಲಿಸಲಾಗಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ದಿನವಹಿ 270 ಮಿಲಿಯನ್ ನೀರು ಸರಬರಾಜು ಮಾಡಲು ಕಾವೇರಿ 4ನೇ ಹಂತ, 1ನೇ ಪೇಸ್ ಯೋಜನೆ ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು 2000 ಇಸವಿಯ ಮಧ್ಯ ಭಾಗದಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.*